# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು | : | ಶ್ರೀ ಕೆ ಅಬ್ದುಲ್ ಜಬ್ಬರ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 2303 |
| ಉತ್ತರಿಸಬೇಕಾದ ದಿನಾಂಕ | : | 26.03.2026 |
| ಉತ್ತರಿಸಬೇಕಾದ ಸಚಿವರು | : | ಸನ್ಮಾನ್ಯ ಮುಖ್ಯಮಂತ್ರಿ |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಹೊಸ ಸಹಕಾರಿ ಸಕ್ಕರೆ ಕಾರ್ಖಾನೆ/ಹಾಲು ಉತ್ಪಾದಕ ಸಂಘ ಸ್ಥಾಪನೆ ಕುರಿತು ಸರ್ಕಾರದ ಯೋಜನೆಗಳಿವೆಯೇ; ಇದ್ದಲ್ಲಿ, ಮಾಹಿತಿ ಒದಗಿಸುವುದು: | ಕರ್ನಾಟಕ ಹಾಲು ಮಹಾಮಂಡಳದ 16 ಜಿಲ್ಲಾ ಹಾಲು ಒಕ್ಕೂಟಗಳ ವ್ಯಾಪ್ತಿಯಲ್ಲಿ ಪ್ರಸ್ತುತ 16,256 ಹಾಲು ಉತ್ಪಾದಕರ ಸಹಕಾರ ಸಂಘಗಳು ಕಾರ್ಯನಿರ್ವಹಿಸುತ್ತಿದ್ದು, ಜಿಲ್ಲಾ ಹಾಲು ಒಕ್ಕೂಟಗಳ ಸಮಗ್ರ ವ್ಯಾಪಾರ ಅಭಿವೃದ್ಧಿ ಯೋಜನೆಯಡಿ ವಾರ್ಷಿಕವಾರು ಸಂಘಗಳ ರಚನೆಗೆ ಗುರಿ ನಿಗದಿಪಡಿಸಿಕೊಂಡು ಹಾಲು ಉತ್ಪಾದಕರ ಸಹಕಾರ ಸಂಘಗಳನ್ನು ಸ್ಥಾಪಿಸಲಾಗುತ್ತಿದೆ.<br><br>ಮುಂದುವರೆದು, ಕೇಂದ್ರ ಸರ್ಕಾರದ ಸಹಕಾರ ಇಲಾಖೆ/ ಪಶುಸಂಗೋಪನೆ ಇಲಾಖೆಯ ಕ್ಷೀರ ಕ್ರಾಂತಿ-02 ರಡಿಯಲ್ಲಿ 2025-26 ನೇ ಸಾಲಿಗೆ 952 ನೂತನ ಹಾಲು ಉತ್ಪಾದಕರ ಸಹಕಾರ ಸಂಘಗಳನ್ನು ಸ್ಥಾಪಿಸುವ ಹಾಗೂ 2117 ಸಂಘಗಳ ಬಲವರ್ಧನೆ ಮಾಡಲು ಗುರಿ ನೀಡಿದ್ದು, ಗುರಿಯನ್ವಯ 952 ಸಂಘಗಳ ಪೈಕಿ 456 ಸಂಘಗಳನ್ನು ಪ್ರಸ್ತುತ ಸ್ಥಾಪಿಸಲಾಗಿರುತ್ತದೆ.<br><br>ರಾಜ್ಯದಲ್ಲಿ ಹೊಸ ಸಹಕಾರಿ ಸಕ್ಕರೆ ಕಾರ್ಖಾನೆಯನ್ನು ಸ್ಥಾಪನೆ ಮಾಡುವ ಕುರಿತು ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ. |
| ಆ) | ಯುವಕರನ್ನು ಸಹಕಾರಿ ಕ್ಷೇತ್ರಕ್ಕೆ ಆಕರ್ಷಿಸಲು ಕೈಗೊಂಡ ವಿಶೇಷ ಕಾರ್ಯಕ್ರಮಗಳು ಯಾವುವು; | ಸಹಕಾರ ಇಲಾಖೆಯ ಸಹಕಾರ ಸಂಘಗಳ ನಿಬಂಧಕರ ಕಛೇರಿ ಹಂತದಲ್ಲಿ ಯುವಕರನ್ನು ಸಹಕಾರಿ ಕ್ಷೇತ್ರಕ್ಕೆ ಆಕರ್ಷಿಸಲು ವಿಶೇಷ ಕಾರ್ಯಕ್ರಮಗಳು ಇರುವುದಿಲ್ಲ. ಆದರೆ 18 ವರ್ಷ ಮೇಲ್ಪಟ್ಟ ಯುವಕ/ಯುವತಿಯರು ತಮ್ಮ ವಾಸ ಸ್ಥಳಗಳ ಕಾರ್ಯವ್ಯಾಪ್ತಿಯಲ್ಲಿರುವ ಎಲ್ಲಾ ವಿವಿಧ ಸಹಕಾರ ಸಂಘಗಳಲ್ಲಿ ಸದಸ್ಯರಾಗಿ ನೋಂದಾಯಿಸಿಕೊಳ್ಳಲು ಮುಕ್ತ ಅವಕಾಶವಿರುತ್ತದೆ. ಈ ಮೂಲಕ ಯುವಕ/ಯುವತಿಯರು ರಾಜ್ಯ ಸರ್ಕಾರವು ಇಲಾಖೆಯ ಮೂಲಕ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳ ಪ್ರಯೋಜನಗಳನ್ನು ಸಹಕಾರ ಸಂಘಗಳ ಮೂಲಕ ಪಡೆಯಲು ಅವಕಾಶವಿರುತ್ತದೆ. |

| | | |
|---|---|---|
| ಇ) | ಸಹಕಾರಿ ಕ್ಷೇತ್ರದ ಡಿಜಿಟಲೀಕರಣಕ್ಕೆ ಅನುದಾನ ಮೀಸಲಾತಿ ಎಷ್ಟು; | ಸಹಕಾರ ಇಲಾಖೆಯ ಸಹಕಾರ ಸಂಘಗಳ ನಿಬಂಧಕರ ಹಂತದಲ್ಲಿ ಸಹಕಾರಿ ಕ್ಷೇತ್ರದ ಡಿಜಿಟಲೀಕರಣಕ್ಕಾಗಿ, ಪ್ರಸ್ತುತ 3 ಕೇಂದ್ರ ಪುರಸ್ಕೃತ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದ್ದು, ವಿವರ ಈ ಕೆಳಕಂಡಂತಿದೆ.<br>1. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಗಣಕೀಕರಣ ಯೋಜನೆ (Computerization of PACS)<br>2. ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್‌ಗಳ ಗಣಕೀಕರಣ ಯೋಜನೆ (Computerization of ARDBs)<br>3. ಸಹಕಾರ ಸಂಘಗಳ ನಿಬಂಧಕರ ಕಛೇರಿಯ ಗಣಕೀಕರಣ ಯೋಜನೆ (Computerization of RCS Office)<br>(ರೂ.ಲಕ್ಷಗಳಲ್ಲಿ)<br>ಕ್ರ.ಸಂ \| ಯೋಜನೆ ಹೆಸರು \| ಮೀಸಲಿಡಲಾದ ಮೊತ್ತ \| ಬಿಡುಗಡೆಯಾದ ಮೊತ್ತ<br>1 \| ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘಗಳ ಗಣಕೀಕರಣ ಯೋಜನೆ \| 9542.76 \| 8821.82<br>2 \| ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್‌ಗಳ ಗಣಕೀಕರಣ ಯೋಜನೆ \| 283.38 \| 283.38<br>3 \| ಸಹಕಾರ ಸಂಘಗಳ ನಿಬಂಧಕರ ಕಛೇರಿಯ ಗಣಕೀಕರಣ ಯೋಜನೆ \| 49.83 \| 49.83 |
| ಈ) | ಸಹಕಾರಿ ಸಂಘಗಳ ಚುನಾವಣೆಗಳನ್ನು ಸಮಯಕ್ಕೆ ನಡೆಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ಸಹಕಾರ ಸಂಘಗಳ ಆಡಳಿತ ಮಂಡಳಿ ಅವಧಿ ಮುಕ್ತಾಯವಾಗುವುದರೊಳಗೆ ನೂತನ ಆಡಳಿತ ಮಂಡಳಿಗೆ ಚುನಾವಣೆಯನ್ನು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 39-ಎ ರೀತ್ಯಾ ನಡೆಸಬೇಕಾಗಿರುತ್ತದೆ. ಸಹಕಾರ ಸಂಘಗಳ ಚುನಾವಣೆಯನ್ನು ನಿಗಧಿತ ಅವಧಿಯಲ್ಲಿ ನಡೆಸಲು ಪ್ರಾಧಿಕಾರವು ಸಹಕಾರ ಸಂಘಗಳ ಕಾರ್ಯವ್ಯಾಪ್ತಿಗಳಿಗೆ ಅನುಗುಣವಾಗಿ ಪ್ರಾಥಮಿಕ ಮತ್ತು ಮಾಧ್ಯಮಿಕ ಸಹಕಾರ ಸಂಘಗಳಿಗೆ ಚುನಾವಣೆ ನಡೆಸಲು ಕ್ಷೇತ್ರ ಮಟ್ಟದ ಸಹಕಾರ ಇಲಾಖಾಧಿಕಾರಿಗಳನ್ನು ಫೆಡರಲ್ ಸಹಕಾರ ಸಂಘಗಳಿಗೆ ಆಯಾಯ ಜಿಲ್ಲೆಗಳ ಜಿಲ್ಲಾಧಿಕಾರಿಗಳನ್ನು ಮತ್ತು ಅಪೆಕ್ಸ್ ಸಹಕಾರ ಸಂಘಗಳಿಗೆ ಪ್ರಾದೇಶಿಕ ಆಯುಕ್ತರನ್ನು ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960 ನಿಯಮ 13(ಬಿಬಿ) ರೀತ್ಯಾ ಚುನಾವಣಾಧಿಕಾರಿಗಳನ್ನಾಗಿ 06 ತಿಂಗಳ ಮುಂಚಿತವಾಗಿ ನೇಮಕ ಮಾಡಿ ಆದೇಶ ಹೊರಡಿಸಲಾಗುತ್ತಿದೆ.<br><br>ಜನವರಿ ಮಾಹೆಯಿಂದ ಡಿಸೆಂಬರ್ ಮಾಹೆಯವರೆಗೆ ಚುನಾವಣೆ ನಡೆಸಬೇಕಾಗಿರುವ ಸಹಕಾರ ಸಂಘಗಳ ಮಾಹಿತಿಯನ್ನು ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ರ ನಿಯಮ 13-ಡಿ(1)ರಂತೆ 120 ದಿನಗಳ ಮುಂಚಿತವಾಗಿ ಎಲ್ಲಾ ಜಿಲ್ಲೆಗಳ ಸಹಕಾರ ಸಂಘಗಳ ಉಪನಿಬಂಧಕರುಗಳಿಂದ ಪಡೆದು ಸದರಿ ಸಹಕಾರ ಸಂಘಗಳ ಚುನಾವಣಾ ಅವಧಿಗನುಗುಣವಾಗಿ ನಿಗದಿತ ಷೆಡ್ಯೂಲ್‌ನಂತೆ ಚುನಾವಣೆ ನಡೆಸಲು ಕ್ರಮವಿಡಲಾಗುತ್ತಿದೆ. ಮುಂದುವರೆದು ಚುನಾವಣೆ ನಡೆದ ಕೂಡಲೇ ಚುನಾವಣೆ ನಡೆದ ಬಗ್ಗೆ ಮಾಹಿತಿಯನ್ನು ಜಿಲ್ಲಾಮಟ್ಟದ ಉಪನಿಬಂಧಕರು/ ಚುನಾವಣಾಧಿಕಾರಿ ಹಾಗೂ ರಿಟರ್ನಿಂಗ್ ಅಧಿಕಾರಿಗಳಿಂದ ಕಾಲಕಾಲಕ್ಕೆ ಪಡೆಯಲಾಗುತ್ತಿದೆ. |

| | | |
|---|---|---|
| | | ಸರ್ಕಾರದಿಂದ ಸಹ ಚುನಾವಣಾ ಪ್ರಕಿಯೆಯನ್ನು ಪಾರದರ್ಶಕವಾಗಿ ನಿಗದಿತವಾಗಿ ನಡೆಸಲು ಅನುಕೂಲವಾಗುವಂತೆ ಚುನಾವಣೆಯ ಪ್ರಸ್ತಾವನೆಯಿಂದ ಚುನಾವಣೆ ಮುಕ್ತಾಯದ ನಂತರದ ಫಲಿತಾಂಶ ಘೋಷಣೆ ಹಾಗೂ ಪದಾಧಿಕಾರಿಗಳ ಚುನಾವಣೆಯ ಮಾಹಿತಿಯನ್ನು ಗಣಕೀಕರಣಗೊಳಿಸುವ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ. |
| ಉ) | ಆಡಳಿತಾಧಿಕಾರಿಗಳ ನೇಮಕಾತಿಯಲ್ಲಿ ಪಾರದರ್ಶಕತೆ ಖಚಿತಪಡಿಸಲು ಯಾವ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ? | ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಕಲಂ 28-ಎ(5) ರನ್ವಯ ಆಡಳಿತ ಮಂಡಳಿ ಅವಧಿ ಮುಗಿಯುವ ಪೂರ್ವದಲ್ಲಿ ಹೊಸ ಆಡಳಿತ ಮಂಡಳಿ ರಚನೆ ಆಗದಿದ್ದರೆ ಯಾರ ಕಾರ್ಯವ್ಯಾಪ್ತಿಯೊಳಗೆ ಸಂಘವು ಇರುವುದೋ ಸದರಿ ರಿಜಿಸ್ಟ್ರಾರನು ಆಡಳಿತಗಾರನಾಗಿ ಪದಗ್ರಹಣ ಮಾಡಿದ್ದಾನೆಂದು ಅಥವಾ ರಿಜಿಸ್ಟ್ರಾರರಿಂದ ಯಾರು ನೇಮಕಗೊಂಡಿದ್ದಾರೋ ಅವರು ಆಡಳಿತಾಧಿಕಾರಿ ಅಧಿಕಾರ ಹೊಂದಿದ್ದಾರೆಂದು ಭಾವಿಸತಕ್ಕದ್ದು ಹಾಗೂ<br>ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 30 ರಡಿ ಆಡಳಿತ ಮಂಡಳಿ ರದ್ದತಿ ಅಥವಾ ಅಮಾನತ್ತುಗೊಳಿಸಿ ಅಡಳಿತಾಧಿಕಾರಿ ನೇಮಕ ಮಾಡಬೇಕಾದಲ್ಲಿ ಸಂಘದ ನಿರ್ದೇಶಕರಿಗೆ ತಮ್ಮ ಅಹವಾಲನ್ನು ಹೇಳಲು ಅವಕಾಶಕೊಟ್ಟು ಅಗತ್ಯತೆ ಕಂಡು ಬಂದಲ್ಲಿ ಆಡಳಿತಾಧಿಕಾರಿಯನ್ನು ನೇಮಕ ಮಾಡಲು ಅವಕಾಶ ಕಲ್ಪಿಸಲಾಗಿದೆ. ಅದರನ್ವಯ ಕ್ರಮವಿಡಲಾಗುವುದರಿಂದ ಆಡಳಿತಾಧಿಕಾರಿಗಳ ನೇಮಕಾತಿಯಲ್ಲಿ ಪಾರದರ್ಶಕತೆಯನ್ನು ಅನುಸರಿಸಲಾಗುತ್ತಿದೆ. |

**ಸಂಖ್ಯೆ: ಸಿಒ 6 ಸಸಕಾ 2026**

(ಸಿದ್ದರಾಮಯ್ಯ)
ಮುಖ್ಯಮಂತ್ರಿ